# ಶ್ಯಾಮಾಶಾಸ್ತ್ರಿಯವರ ದೇವೀ ಕೃತಿಗಳು

**ಪ್ರೇಮಲತಾ**

**ಅ**ಧ್ಯಾತ್ಮವು ಬದುಕಿನ ಅನಿವಾರ್ಯ ಅಂಗವಾದಾಗ ಅದು ಆತ್ಮೋನ್ನತಿಗಾಗಿ ಕಂಡುಕೊಂಡ ಮಾರ್ಗಗಳಲ್ಲಿ ಸಂಗೀತವೂ ಒಂದು. ಭಕ್ತಿಯೋಗದಲ್ಲಂತೂ ಸಂಗೀತಕ್ಕೇ ಆದ್ಯತೆ. ಹೀಗೆ ಆತ್ಮಸಾಕ್ಷಾತ್ಕಾರಕ್ಕಾಗಿ ಸಂಗೀತದ ಹಾದಿಯಲ್ಲಿ ಮುನ್ನಡೆದ ಸಂಗೀತ ವರೇಣ್ಯರು ನಮ್ಮಲ್ಲಿ ಅನೇಕರು ಆಗಿಹೋಗಿದ್ದಾರೆ. ಅವರಲ್ಲಿ ಶ್ಯಾಮಾ ಶಾಸ್ತ್ರಿಗಳೂ ಒಬ್ಬರು.

**ಶ್ರೀ ತ್ಯಾಗರಾಜರು, ಶ್ರೀ ಮುತ್ತುಸ್ವಾಮಿ ದೀಕ್ಷಿತರು** ಹಾಗೂ **ಶ್ರೀ ಶ್ಯಾಮಾಶಾಸ್ತ್ರಿಗಳು** ಕರ್ನಾಟಕ ಸಂಗೀತ ತ್ರಿಮೂರ್ತಿಗಳೆಂದು ಪ್ರಸಿದ್ಧರಾಗಿದ್ದಾರೆ. ಇವರಲ್ಲಿ ಶಾಸ್ತ್ರಿಯವರು ಹಿರಿಯರು.

೧೭೬೨ ರ ಏಪ್ರಿಲ್ ೨ ರಂದು ತಮಿಳ್ನಾಡಿನ ತಿರುವಾರೂರಿನಲ್ಲಿ ಶಾಸ್ತ್ರಿಗಳ ಜನನ. ತಂದೆ ವಿಶ್ವನಾಥ ಅಯ್ಯರ್ ಹಾಗೂ ತಾಯಿ ವೆಂಗಲಕ್ಷ್ಮಿಯವರು ತಮಿಳು ಸ್ಮಾರ್ತ ಬ್ರಾಹ್ಮಣರು. ಶಿಶುವಿಗೆ ವೆಂಕಟಸುಬ್ರಹ್ಮಣ್ಯನೆಂದು ಹೆಸರಿಟ್ಟಿದ್ದರೂ ಮುದ್ದಿಗಾಗಿ ಕರೆದದ್ದು **'ಶ್ಯಾಮ'** ನೆಂದು. ಪ್ರಸಿದ್ಧರಾದದ್ದು ಶ್ಯಾಮಾಶಾಸ್ತ್ರಿಗಳೆಂದು.

ತಮ್ಮ ೧೮ ನೇ ವಯಸ್ಸಿಗೆ ತಂದೆ–ತಾಯಿಯರೊಂದಿಗೆ ತಂಜಾವೂರಿಗೆ ಬಂದು ನೆಲೆಸಿದ ಶಾಸ್ತ್ರಿಗಳು ಅಲ್ಲಿನ ಬಂಗಾರು ಕಾಮಾಕ್ಷಿ ದೇಗುಲದಲ್ಲಿ ಅರ್ಚಕರಾಗಿದ್ದ ತಂದೆಗೆ ಸಹಾಯ ಮಾಡಲು ದೇವಸ್ಥಾನಕ್ಕೆ ಹೋಗುತ್ತಿದ್ದರು. ಅವರಿಗೆ ಕ್ರಮೇಣ ದೇವಿಯಲ್ಲಿ ಶ್ರದ್ಧೆ ಅಧಿಕವಾಗುತ್ತಾ ಬಂದಿತು; ಕಾಮಾಕ್ಷಿಯ ಅನನ್ಯಭಕ್ತರಾಗಿ ತಂದೆಯ ಬಳಿಕ ಇವರೇ ಅರ್ಚಕ ವೃತ್ತಿ ನಿರ್ವಹಿಸುವಂತಾಯಿತು. ಮನೆಯಲ್ಲಿ ಕಂಚಿಕಾಮಾಕ್ಷಿಯ ಉಪಾಸನೆ, ದೇಗುಲದಲ್ಲಿ ಬಂಗಾರು ಕಾಮಾಕ್ಷಿಯ ಅರ್ಚಕ ವೃತ್ತಿ, ಇಷ್ಟಲ್ಲದೆ ಶ್ರೀಚಕ್ರೋಪಾಸನೆ. ಈ ರೀತಿಯಲ್ಲಿ ಮೂಲತಃ ದೇವೀ ಉಪಾಸಕರಾದ ಅವರು ಹಲವು ಸಂದರ್ಭಗಳಲ್ಲಿ ದೇವಿಯನ್ನು ಪ್ರಾರ್ಥಿಸುತ್ತಾ ದೈವೀಭಾವದಲ್ಲಿ ಲೀನರಾಗಿ ಬಾಹ್ಯಪ್ರಜ್ಞಾಹೀನರಾಗುತ್ತಿದ್ದರಂತೆ!

ಸಣ್ಣ ವಯಸ್ಸಿಗೇ ಶಾಸ್ತ್ರಿಗಳು ಸಂಸ್ಕೃತ ಮತ್ತು ತೆಲುಗು ಭಾಷೆಗಳಲ್ಲಿ ಅಪಾರ ಪಾಂಡಿತ್ಯ ಗಳಿಸಿದ್ದರು. ಅವರ ಹಿರಿಯರು ಸಂಗೀತಾಸಕ್ತರಲ್ಲವಾದರೂ ಶಾಸ್ತ್ರಿಗಳು ಸಂಗೀತಜ್ಞರಾಗಲು ಅವರಿಗೆ ಜನ್ಮಜಾತವಾಗಿ ಬಂದಿದ್ದ ಮಧುರಕಂಠ, ಆಸಕ್ತಿ, ಪ್ರತಿಭೆಗಳೊಂದಿಗೆ ಪೂರ್ವಜನ್ಮ ಸಂಸ್ಕಾರವೂ, ದೇವಿಯ ಅನುಗ್ರಹವೂ ಕಾರಣವಿದ್ದೀತು.

ಲೇಖಕಿ ಬೆಂಗಳೂರು ರಾಮಕೃಷ್ಣ ಮಠದ ಭಕ್ತರು. ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಇವರ ಲೇಖನಗಳು ಹಲವಾರು ಪತ್ರಿಕೆಗಳಲ್ಲಿ ಪ್ರಕಟವಾಗಿವೆ.



ತಾಯಿಯ ಸೋದರಸಂಬಂಧಿಯಿಂದ ಇವರಿಗೆ ಚಿಕ್ಕಂದಿನಲ್ಲೇ ಸಂಗೀತದ ಪ್ರಾಥಮಿಕ ಪಾಠವಾಯಿತು. 'ಸಂಗೀತ ಸ್ವಾಮಿ' ಎಂಬ ಸಂಗೀತಜ್ಞ ಸಂನ್ಯಾಸಿಗಳಿಂದ ರಾಗ–ತಾಳ–ಸ್ವರ ಪ್ರಸ್ತಾರ ಇತ್ಯಾದಿಗಳ ಆಳವಾದ ಅಭ್ಯಾಸವಾಯಿತು. ಆದಿ ಅಪ್ಪಯ್ಯನಂಥ ವಿದ್ವಾಂಸರಿಂದ ಮಾರ್ಗದರ್ಶನವೂ ಆಯಿತು. ಅಲ್ಲದೆ ಶ್ರೀತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರೊಂದಿಗಿನ ಒಡನಾಟವೂ ದೊರಕಿತು. ಇವು ಶಾಸ್ತ್ರಿಗಳ ಸಂಗೀತಜ್ಞಾನ ಶ್ರೀಮಂತವಾಗಲು ಸಹಕಾರಿಯಾದವು.

ಇವರ ಕೃತಿಗಳು ತ್ಯಾಗರಾಜರ ಕೃತಿಗಳಷ್ಟು ಸರಳವಲ್ಲದ, ದೀಕ್ಷಿತರ ಕೃತಿಗಳಷ್ಟು ಕಠಿಣವಲ್ಲದ ರಚನೆಗಳಾಗಿದ್ದು 'ಕದಳೀ ಪಾಕ' ವೆನಿಸಿದೆ. ಇವರ ಬಹುಪಾಲು ರಚನೆಗಳು ತೆಲುಗಿನಲ್ಲಿಯೂ, ಕೆಲವು ಸಂಸ್ಕೃತ ಹಾಗೂ ತಮಿಳಿನಲ್ಲಿಯೂ ಇವೆ. ತಾಳ, ಲಯ ನಿರ್ವಹಣೆಯಲ್ಲಿ ಅತ್ಯಂತ ನಿಪುಣರಾಗಿದ್ದು ಹಲವು ಬಗೆಯ ತಾಳಗಳನ್ನು ಪ್ರಚುರಪಡಿಸಿದ್ದರಿಂದ ಇವರು 'ತಾಳ ಪ್ರಸ್ತಾರ

ಶ್ಯಾಮಾಶಾಸ್ತ್ರಿ' ಎಂಬ ವಿಶೇಷಣಕ್ಕೆ ಭಾಗಿಯಾಗಿದ್ದರು. ತಮ್ಮ ಕೃತಿಗಳಲ್ಲಿ 'ಸ್ವರಾಕ್ಷರ'ಗಳ ಸಾಹಿತ್ಯಿಕ ಸೌಂದರ್ಯವನ್ನು ಬಳಸುವುದರಲ್ಲಿ ಅವರಿಗೆ ಒಲವು. ಹಲವು ಅಪ್ರಚಲಿತ ರಾಗಗಳಲ್ಲೂ ತಮ್ಮ ಕೃತಿಗಳನ್ನು ರಚಿಸಿದ್ದಾರೆ. ಉದಾಹರಣೆಗೆ ಚಿಂತಾಮಣಿ, ಕಲ್ಗಡ, ಮಾಂಜಿ, ಪರಜು ಇತ್ಯಾದಿ.

ಶ್ಯಾಮಾಶಾಸ್ತ್ರಿಗಳು ಸುಮಾರು ೩೦೦ ಕೃತಿಗಳನ್ನು ರಚಿಸಿರಬಹುದೆಂದು ಹೇಳಲಾಗಿದೆ. ಆದರೆ ಸುಮಾರು ೭೧ ಕೃತಿಗಳು ಮಾತ್ರ ಮುದ್ರಣದಲ್ಲಿ ಸಿಗುತ್ತವೆ. ಇವುಗಳಲ್ಲಿ ೫೧ ತೆಲುಗು, ೧೫ ಸಂಸ್ಕೃತ, ೫ ತಮಿಳು ಭಾಷೆಯಲ್ಲಿವೆ. ಅವುಗಳಲ್ಲಿ ೫೯ ಕೃತಿ, ೫ ಗೀತೆ, ೩ ಸ್ವರಜತಿ, ೪ ವರ್ಣಗಳು ಇವೆ. 'ಶ್ಯಾಮಕೃಷ್ಣ' ಎಂಬುದು ಅವರ ಅಂಕಿತ.

ಶ್ರೀಕಾಮಾಕ್ಷಿ ದೇವಿಯ ಅನನ್ಯಭಕ್ತರಾಗಿದ್ದ ಅವರು ದೇವಿಯ ಜೊತೆ ಸಂಭಾಷಿಸುತ್ತಿದ್ದರಂತೆ! ಅವಳ ಅರ್ಚನೆ, ವರ್ಣನೆಗಳಿಗೆ ಅವರು ಆಯ್ದುಕೊಂಡದ್ದು ಸಂಗೀತ ಮಾಧ್ಯಮವನ್ನು. ಹಾಗೆಂದೇ ಅವರ ಹೆಚ್ಚಿನೆಲ್ಲ ರಚನೆಗಳೂ ದೇವಿಯನ್ನು ಕುರಿತವುಗಳಾಗಿವೆ. ದೇವಿ ಕಾವಾಕ್ಷಿಯನ್ನು ಕುರಿತಾಗಿಯೇ ೩೫ ಕೃತಿಗಳು ರಚಿತವಾಗಿವೆ. ಅವುಗಳಲ್ಲಿ ಕಂಚಿ ಕಾಮಾಕ್ಷಿಯನ್ನು ಕುರಿತು ೧೬, ತಂಜಾವೂರು ಬಂಗಾರು ಕಾಮಾಕ್ಷಿಯನ್ನು ಕುರಿತು ೫, ಕಾಮಕೋಟಿಯನ್ನು ಕುರಿತು (ಕಂಚಿ ಪದವನ್ನು ಬಳಸದೆ) ೬, ಕಾಮಾಕ್ಷಿಯನ್ನು ಕುರಿತು ೮, ಅಖಿಲಾಂಡೇಶ್ವರಿಯನ್ನು ಕುರಿತು ೫, ಧರ್ಮಸಂವರ್ಧಿನಿಯನ್ನು ಕುರಿತು ೩, ನೀಲಾಯತಾಕ್ಷಿಯನ್ನು ಕುರಿತು ೨, ಮಧುರೆ ಮೀನಾಕ್ಷಿಯನ್ನು ಕುರಿತು ೮, ದೇವಿಯನ್ನು ಕುರಿತು (ಸ್ಪಷ್ಟ ಹೆಸರಿಸದ) ೭ ಕೃತಿಗಳಿವೆ. ಇನ್ನುಳಿದ ಕೆಲವೇ ಕೆಲವು ದೇವಿಯ ಕುರಿತಲ್ಲದವು.

ಶಾಸ್ತ್ರಿಗಳು ಪ್ರಸಿದ್ಧರಾದ ಬಳಿಕ ಅವರ ಕನಸಿನಲ್ಲಿ 'ಸಂಗೀತ ಸ್ವಾಮಿ' ಗಳು ಕಾಣಿಸಿ, 'ಮಧುರೆ ಮೀನಾಕ್ಷಿಯ ಸನ್ನಿಧಿಯಲ್ಲಿ ಕೃತಿ ರಚಿಸಿ ದೇವಿಯ ಅನುಗ್ರಹ ಪಡೆ' ಎಂದು ನಿರ್ದೇಶಿಸಿದರು. ತಮ್ಮ ಗುರುವಾಕ್ಯದಂತೆ ಶಾಸ್ತ್ರಿಗಳು ಮಧುರೆ ಮೀನಾಕ್ಷಿಯ ಸನ್ನಿಧಿಯಲ್ಲಿ ದೇವಿಯ ಕುರಿತಾಗಿ ಒಂಬತ್ತು ಕೃತಿಗಳನ್ನು ರಚಿಸಿದ್ದಾರೆ. ಅವು **ದೇವಿ ನವರತ್ನ ಮಾಲಿಕಾ** ಎಂಬುದಾಗಿ ಪ್ರಸಿದ್ಧವಾಗಿವೆ.

**೧) ಮೀನಲೋಚನ ಬ್ರೋವ – ಧನ್ಯಾಸಿ – ಮಿಶ್ರಚಾಪು**

**೨) ಸರೋಜದಲನೇತ್ರಿ – ಶಂಕರಾಭರಣಂ – ಆದಿ**

**೩) ದೇವಿ ಮೀನನೇತ್ರಿ – ಶಂಕರಾಭರಣಂ – ಆದಿ**

**೪) ಮರಿವೇರೆ – ಆನಂದಭೈರವಿ – ಮಿಶ್ರಚಾಪು**

**೫) ದೇವಿ ನೀದು ಪಾದ ಸರಸಮುಲೆ – ಕಾಂಭೋಜಿ – ಆದಿ**

**೬) ಮಾಯಮ್ಮ – ಆಹಿರಿ – ಆದಿ**

**೭) ನನು ಬ್ರೋವ ಲಲಿತ – ಲಲಿತ – ಮಿಶ್ರಚಾಪು**

**೮) ರಾವೆ ಪರ್ವತರಾಜ ಕುಮಾರಿ – ಕಲ್ಯಾಣಿ – ಆದಿ**

**೯) ಅನುಪಲಬ್ಧ**

ಶಾಸ್ತ್ರಿಗಳ ಅತ್ಯಂತ ಪ್ರಿಯರಾಗವೆಂದರೆ **ಆನಂದಭೈರವಿ**. ಬಹುಶಃ, ಅವರ ಹೆಚ್ಚಿನ ಕೃತಿಗಳು ಈ ರಾಗದಲ್ಲಿವೆ. ಉದಾಹರಣೆಗೆ **ಮರಿವೇರೆಗತಿ, ಹಿಮಾಚಲ ತನಯೆ, ಓ ಜಗದಂಬ ಪಾಹಿ, ಶ್ರೀಗಿರಿರಾಜಸುತೆ** ಇತ್ಯಾದಿ.

ತಂಜಾವೂರಿನ ಅರಮನೆಯ ಆಸ್ಥಾನದಲ್ಲಿ ಬೇರೆ ರಾಜ್ಯದ ವಿದ್ವಾಂಸರೊಂದಿಗೆ ಸಂಗೀತದ ಸವಾಲು ಎದುರಿಸಬೇಕಾಗಿ ಬಂದಾಗ ಶಾಸ್ತ್ರಿಗಳು ಗರ್ಭಗುಡಿಯಲ್ಲಿ ದೇವಿಯ ಮುಂದೆ ಧ್ಯಾನಾಸಕ್ತರಾಗಿದ್ದು ನಂತರ ಹಾಡಿದುದೇ **ದೇವಿ, ಬ್ರೋವ ಸಮಯಮಿದೆ** (ದೇವಿ! ನೀನು ನನ್ನನ್ನು ಕಾಯುವ ಸಮಯ ಇದು). ಇದರ ನಂತರ ಆಸ್ಥಾನದಲ್ಲಿ ಆತ್ಮವಿಶ್ವಾಸದಿಂದ ಹಾಡಿ ವಿಜಯಿಯಾದರು.

ಸಂಗೀತದಲ್ಲಿ 'ಸ್ವರಜತಿ' ಪ್ರಕಾರವನ್ನು ವಿನ್ಯಾಸಗೊಳಿಸಿದ್ದು ಶ್ಯಾಮಾಶಾಸ್ತ್ರಿಗಳು. ಮಿಶ್ರಚಾಪು ತಾಳದಲ್ಲಿರುವ ಭೈರವಿ, ಯದುಕುಲ ಕಾಂಭೋಜಿ, ತೋಡಿ ರಾಗದ ಅವರ ಸ್ವರಜತಿಗಳು 'ರತ್ನತ್ರಯ' ಎಂದು ವಿಖ್ಯಾತವಾಗಿವೆ.

ಶ್ರೀವಿದ್ಯಾ ಉಪಾಸಕರಾಗಿದ್ದುದರಿಂದ ಅದರ ವಿವರಗಳನ್ನು ಒಳಗೊಂಡ **ಲಘು ಶ್ರೀವಿದ್ಯಾ ಉಪಾಸನಾ ಕ್ರಮ** ಎಂಬ ಪುಸ್ತಕವನ್ನು ಇವರು ರಚಿಸಿರುವುದೊಂದು ವಿಶೇಷ.

ಇವರ ಮೊಟ್ಟಮೊದಲ ರಚನೆ ಸಂಸ್ಕೃತಭಾಷೆಯಲ್ಲಿದೆ. ಸಾವೇರಿ ರಾಗದ **ಜನನಿ ನತಜನಪರಿಪಾಲಿನಿ, ಪಾಹಿ ಮಾಂ, ಭವಾನಿ** ಎಂಬೀ ಕೃತಿಯಲ್ಲಿ ದೇವಿಯು ನಮ್ಮೆಲ್ಲರನ್ನೂ ಪಾಲಿಸುವ, ಪಾಪಗಳನ್ನು ನಿವಾರಿಸುವ ಮೋಕ್ಷದಾಯಿನಿ ಎಂಬರ್ಥ ಇದೆ. (**ಸಕಲ ಜನ ಪರಿತಾಪ ಪಾಪಹಾರಿಣಿ**).

ಇವರು ತಮ್ಮ ಕೃತಿಗಳಲ್ಲಿ ಭಗವತಿಯ ಕಾರುಣ್ಯ ಮತ್ತು ಅವಳಲ್ಲಿ ತಮ್ಮ ದೃಢಭಕ್ತಿಯನ್ನು ಪ್ರಕಟಗೊಳಿಸುತ್ತಾ ಸಾಗುತ್ತಾರೆ. ಉದಾಹರಣೆಗೆ 'ಓ' ಎಂಬ ಒಂದೇ ಸ್ವರದ ಅಥವಾ 'ನಮ್ಮಿ ನಾನು' ಎಂಬೊಂದು ಶಬ್ದದ ಪುನರಾವೃತ್ತಿಯ, ಸರಳಭಾವದ ತೀಕ್ಷ್ಣ ಪ್ರತಿಪಾದನೆಯು ಕೇಳುಗರನ್ನು ಆನಂದದ ಸ್ಥಾಯಿಗೆ ಒಯ್ಯಬಲ್ಲುದು. ಸಾಮಾನ್ಯ ಶಬ್ದಗಳಾದ **ಜನನಿ, ತಲ್ಲಿ, ಅಮ್ಮ, ನಿನ್ನುವಿನಾ ಗತಿ, ನಮ್ಮಿತಿನಿ, ನೀವೇ ದಿಕ್ಕನಿ, ಕೃಪಜೂಚಿ** ಇತ್ಯಾದಿ ಪದಗಳು ಭಾವನೆಗಳನ್ನು ಸುಲಲಿತವಾಗಿ ಪ್ರಕಟಿಸಬಲ್ಲವು. ದೇವಿಯನ್ನು **ಪಾಹಿ ಶ್ರೀಗಿರಿರಾಜಸುತೆ** ಎಂದು ಪ್ರಾರ್ಥಿಸುತ್ತಾ, ತಾನು ಅಪೂರ್ವ ಶೈಲಿಯಲ್ಲಿ ಕೃತಿ ರಚಿಸುವಂತೆ ಅನುಗ್ರಹಿಸಬೇಕು ಎಂದು **ದೇಹಿ ಮಾತೆ ಅನುಪಮ** ಗೀತಂ ಎಂಬ ಮಾತುಗಳ ಮೂಲಕ ಅವರು ಬೇಡಿಕೊಳ್ಳುತ್ತಾರೆ.

**ಸಂಗೀತವೆಂದರೆ ಅತ್ಯುತ್ಕೃಷ್ಟ ಕಲೆ**. ಇದನ್ನು **ಅರ್ಥ ಮಾಡಿಕೊಂಡವರಿಗೆ ಇದು ಅತ್ಯುನ್ನತ ಆರಾಧನೆ** ಎಂಬ ಸ್ವಾಮಿ ವಿವೇಕಾನಂದರ ಮಾತಿಗೆ ಭಾಷ್ಯ ಬರೆದಂತಿದೆ ಶ್ಯಾಮಾಶಾಸ್ತ್ರಿಗಳ ಸಂಗೀತಮಯ ಬದುಕು. ಅವರಿಗೆ ಭಕ್ತಿಮಾರ್ಗದ ನಾದೋಪಾಸನೆಯೇ ಭಗವತಿಯ ಆರಾಧನೆಯಾಗಿತ್ತು.

ಉದಾ. 'ನವರತ್ನ ಮಾಲಿಕೆ'ಯ ಕೃತಿಯೊಂದನ್ನು ಗಮನಿಸುವುದಾದರೆ, (ರಾಗ–ಶಂಕರಾಭರಣ, ತಾಳ–ಆದಿ)

**ಸರೋಜದಲ ನೇತ್ರಿ ಹಿಮಗಿರಿ ಪುತ್ರಿ, ನೀ ಪದಾಂಬುಜಮುಲೆ**
**ಸದಾ ನಮ್ಮಿನಾನಮ್ಮ, ಶುಭಮಿಮ್ಮ, ಶ್ರೀ ಮೀನಾಕ್ಷಮ್ಮ ॥**

"ನಿನ್ನ ಪದಾಂಬುಜವನ್ನೇ ಸದಾ ನಂಬಿರುವ ನನಗೆ ಶುಭವನ್ನು ಕರುಣಿಸು" ಎನ್ನುವಲ್ಲಿ ಭಕ್ತನ ಅನನ್ಯ ಶರಣಾಗತಿ ವ್ಯಕ್ತವಾಗಿದೆ.

**ಕೋರಿವಚ್ಚಿನವಾರಿಕೆಲ್ಲನು ಕೋರ್ಕಲೊಸಗೆ ಬಿರುದುಗದಾ**
**ಅತಿಭಾರಮಾ, ನನ್ನು ಬ್ರೋವ ತಲ್ಲಿ, ಕೃಪಾಲವಾಲನೆ**
**ತಾಳಜಾಲನೆ ॥ಚ॥**

"ಬೇಡಿಬಂದವರಿಗೆಲ್ಲ ಕೇಳಿದ ವರವನ್ನು ಕೊಡುವೆ ಎಂಬ ಬಿರುದು ಉಳ್ಳ ನಿನಗೆ ನನ್ನನ್ನು ಕಾಪಾಡುವುದು ಅತಿಭಾರವೇ? ನಾನು ತಾಳಲಾರೆ. ನನಗೆ ಕರುಣೆ ತೋರಬಾರದೆ?"

**ಇಂದುಮುಖಿ, ಕರುಣಿಂಚುಮನಿ ನೇನೆಂತೋ ವೇಡುಕೊಂಟಿನಿ**
**ನಾಯಂದು ಜಾಗೇಲನಮ್ಮಾ, ಮರಿಯಾದ ಗಾದು,**
**ದಯಾವತಿ ನೀವು ॥ಚ॥**

"ಇಂದುಮುಖಿ, ಕರುಣಿಸೆಂದು ನಿನ್ನನ್ನೆಷ್ಟೋ ಬೇಡಿಕೊಂಡರೂ, ನನ್ನಲ್ಲಿಂತು ನಿರ್ಲಕ್ಷ್ಯವೇ? ದಯಾಮಯಿಯಾದ ನಿನಗಿದು ತರವಲ್ಲ" ಎಂದು ಆತ್ಮೀಯವಾಗಿ ದೂಷಿಸುತ್ತಲೇ ದೇವಿಯನ್ನು ಯಾಚಿಸುವ ಪರಿ ಅತ್ಯಂತ ಸಹಜವೆನಿಸುತ್ತದೆ.

**ಸಾಮಗಾನ ವಿನೋದಿನಿ, ಗುಣಧಾಮ ಶ್ಯಾಮಕೃಷ್ಣನುತ**
**ಶುಕ ಶ್ಯಾಮಲಾದೇವಿ ನೀವೇ ಗತಿ, ರತಿ ಕಾಮ ಕಾಮ್ಯದ**
**ಕಾವವೇ ನನ್ನು ॥ಚ॥**

"ಸಾಮಗಾನದ ಆಸ್ವಾದಿನಿ, ಸರ್ವ ಸದ್ಗುಣಗಳ ಗಣಿ, ಶ್ಯಾಮಕೃಷ್ಣನಿಂದ ನುತಿಸಲ್ಪಟ್ಟವಳೇ, ನೀನೇ ನನ್ನನ್ನು ಸಲಹಬೇಕು, ನಿನ್ನ ಹೊರತಿನ್ನಾರೂ ನನ್ನನ್ನು ಕಾಯುವವರಿಲ್ಲ" ಎಂದು ದೇವಿಯಲ್ಲಿ ಮೊರೆಹೋಗುತ್ತಾರೆ.

ದೇವಿಯ ರೂಪ–ಸ್ವರೂಪ–ಗುಣವರ್ಣನೆ ಹಾಗೂ ದೇವಿಯೊಂದಿಗಿನ ಆಪ್ತತೆ, ಭಕ್ತಿಯ ಆಳ, ಭಾವತೀವ್ರತೆ, ಯಾಚನೆ, ಶರಣಾಗತಿ, ಮೊರೆ ಇತ್ಯಾದಿಗಳನ್ನು ಅವರ ಎಲ್ಲ ರಚನೆಗಳಲ್ಲೂ ಕಾಣಬಹುದಾಗಿದೆ. ಅದಕ್ಕೆ ಕೆಲವು ನಿದರ್ಶನಗಳು ಹೀಗಿವೆ:

**ದಯಜೂಡ ಮಂಚಿ ಸಮಯಮಿದೇ, ಅತಿ ವೇಗಮೇ ವಚ್ಚಿ**
**ಜಗಮೊಸಗೇ ಶಂಕರೀ, ನೀವು ಜನನಿಗದಾ ಬೃಹದಂಬಾ ॥**
**ಕನಕಾಂಗೀ ನೀ ಪಾದಕಮಲಮೇ ದಿಕ್ಕನಿ ನಮ್ಮಿ ನಾನು ನೇನು ।**

(ರಾಗ –ಜಗನ್ಮೋಹಿನಿ, ತಾಳ–ಮಿಶ್ರಚಾಪು)

"ದಯೆಯಿಂದ ಬೇಗಬಂದು ಸಲಹುವ ಸಮಯವಿದು, ಸಾಫಲ್ಯ ನೀಡೆನಗೆ, ವಿಶ್ವವೆಲ್ಲಾ ಸ್ತುತಿಸುವ ಜನನಿಯಲ್ಲವೇ ನೀನು, ಅಂಬಾ? ನಿನ್ನ ಪಾದ ಕಮಲವೇ ದಿಕ್ಕೆಂದು ನಾನು ನಂಬಿದ್ದೇನೆ."

ಮತ್ತೆ ಕೆಲವು ಉದಾಹರಣೆಗಳನ್ನು ನೋಡೋಣ. ಅವರು ತಮ್ಮ ಕೃತಿಗಳಲ್ಲಿ ದೇವಿಯನ್ನು ಹೀಗೆ ಬೇಡಿಕೊಳ್ಳುತ್ತಾರೆ:

**ಏಮೋ ಕಲಕಚಿಂದಿ ಮನಮುನ ನೇ ನೆಚ್ಚಿತ ಗತಿಗಾನಕನು**
**ನೀ ಮಹಿಮಲೆಲ್ಲ ಚೆವುಲಾರಗ ವಿನಿ, ಈ ಮನಸುಲೋನಿ ವೆತ**
**ದೀರ್ಚುತಕೀ ವೇಳ ಬಹು ನಿಪುಣಾವನಿ ಕಾಮಾಕ್ಷೀ ನೀವೇ,**
**ವೇರೆವರು ಕಾದನಿ ದಲಚಿಗೊಲಿಚಿತಿನಿ ॥ಚ॥**

"ಮನನೊಂದು, ಬೇರೆ ದಾರಿ ಕಾಣದೆ, ಕಾಮಾಕ್ಷೀ, ನಿನ್ನ ಮಹಿಮೆಗಳನ್ನ ಕಿವಿಯಾರೆ ಕೇಳಿ, ಈ ಮನಸ್ಸಿನ ವ್ಯಥೆಯನ್ನು ಕಳೆಯುವುದರಲ್ಲಿ ನೀನು ಬಹಳ ನಿಪುಣಳಿರುವೆ, ಬೇರಿಲ್ಲದೆಂದೆಣಿಸಿ ನಿನಗೇ ಶರಣು ಬಂದಿಹೆನಮ್ಮಾ."

"ನನ್ನಮ್ಮಾ ಎಂದು ಕರೆದರೆ ನನ್ನೊಡನೆ ಮಾತಾಡಬಾರದೇ ಅಂಬಾ? ನಿನಗಿದು ನ್ಯಾಯವೇ ಮೀನಾಕ್ಷಮ್ಮಾ? ನಿನ್ನ ಹೊರತಿನ್ನಾರು ದಿಕ್ಕು? ಅಭಯ ನೀಡಿ ನನ್ನನ್ನು ಸಲಹು, ಓ ವರದೆ. ನೀನೇ ಗತಿ ಅಂಬಿಕೆ. ಮಗುವೆಂದು ಅಪಾರ ದಯೆ ಇಲ್ಲವೇ? ಅಖಿಲಲೋಕ ಜನನಿಯಾದ ನೀನು ಅನಾಥರಕ್ಷಕಿಯಲ್ಲವೇ?"

**ಧ್ಯಾನಮೇ ವಿನಗ, ಮಂತ್ರ ತಂತ್ರಮೇಮಿತಿರುಗನೇ,**
**ಗಾನವಿನೋದಿನೀ**
**ನೀಡು ಸಾಟಿ ಜಗಾನ ಗಾನನೇ ಬಂಗಾರು ಬೊಮ್ಮ ॥ಚ॥**

"ಧ್ಯಾನದ ಹೊರತು ಮಂತ್ರ–ತಂತ್ರಗಳೇನೂ ಅರಿಯೆ. ಜಗತ್ತಿನಲ್ಲಿ ನಿನಗೆ ಸರಿಸಾಟಿ ಯಾರನ್ನೂ ಕಾಣೆನು." ತಂಜಾವೂರಿನ ಬಂಗಾರು ಕಾಮಾಕ್ಷಿ ದೇವಿಯನ್ನು 'ಬಂಗಾರು ಬೊಮ್ಮ' (ಸ್ವರ್ಣ ಪುತ್ಥಳಿ) ಎಂದಿಲ್ಲಿ ಸಂಬೋಧಿಸಿದ್ದಿರಬೇಕು.

ವಿಶಿಷ್ಟಾದ್ವೈತ ಸಿದ್ಧಾಂತದಿಂದ ಪ್ರಭಾವಿತಗೊಂಡ ಶ್ಯಾಮಾಶಾಸ್ತ್ರಿಯವರ ರಚನೆಗಳು, ದೇವಿಯಲ್ಲಿ ಸಂಪೂರ್ಣ ಶರಣಾಗತಿಯೊಂದಿಗೆ ತಾನಾಗಿ ಚಿಲುಮೆಯಾಗಿ ಚಿಮ್ಮಿ ಹರಿದ ಭಕ್ತಿ–ಭಾವಪೂರಿತ ಸಂಗೀತಗಂಗೆಯಾಗಿದೆ. ಶಾಸ್ತ್ರಿಗಳು ಮೂಲತಃ ದೇವೀ ಉಪಾಸಕರಾಗಿದ್ದರಿಂದ ಅವರ ಕೃತಿಗಳಲ್ಲಿ ಕಾಣುವ ಭಕ್ತನ ಅಥವಾ ಸಾಧಕನ ಭಾವನೆಗೆ ಅದರದೇ ಆದ ಅನನ್ಯತೆ ಇದೆ, ಸೌಂದರ್ಯ ಇದೆ. ಹೀಗಾಗಿ ಇವು ಶಾಸ್ತ್ರೀಯ ದೃಷ್ಟಿಯಿಂದಲ್ಲದೆ ಆಧ್ಯಾತ್ಮಿಕ ದೃಷ್ಟಿಯಿಂದಲೂ ಅಪೂರ್ವವೆಂದು ಪರಿಗಣಿತವಾಗಿವೆ. ಸಂಖ್ಯೆಯಲ್ಲಿ ವಿಪುಲವಲ್ಲದಿದ್ದರೂ ಭಕ್ತಿಭಾವ, ಸೃಜನಶೀಲತೆ, ಪಾಂಡಿತ್ಯ, ವೈಶಿಷ್ಟ್ಯಗಳಿಂದ ಅಪೂರ್ವವಾಗಿರುವ ಇವುಗಳನ್ನು ಶಾಸ್ತ್ರಿಗಳು ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ನೀಡಿದ ಅಮೂಲ್ಯ ಕೊಡುಗೆಗಳೆಂದೇ ಹೇಳಬೇಕು.

ತಮ್ಮ ಸಮಕಾಲೀನರಾಗಿದ್ದ ತ್ಯಾಗರಾಜರು ಮತ್ತು ದೀಕ್ಷಿತರಂತೆ ಶ್ಯಾಮಾಶಾಸ್ತ್ರಿಗಳೂ ಕೂಡ ತಮ್ಮ ದೇಹತ್ಯಾಗದ ದಿನ ಮತ್ತು ಸಮಯವನ್ನು ಮುಂದಾಗಿಯೇ ತಿಳಿಸಿದ್ದರು. ೧೮೨೭ ರ ಫೆಬ್ರವರಿ ೬ ರಂದು, ತಮ್ಮ ಪತ್ನಿಯು ಕಾಲವಾಗಿ ೬ ನೆಯ ದಿನ, ತಮ್ಮ ೬೫ ನೇ ವಯಸ್ಸಿನಲ್ಲಿ ಇವರು ಭೌತಿಕ ಶರೀರ ತ್ಯಾಗ ಮಾಡಿದರು.